**ಸಾಕ್ಷಿಯನ್ನು ದಿನಾಂಕಃ 24.10.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ದಿನಾಂಕಃ 25.09.2009 ರಂದು ಒಪ್ಪಂದದ ಕರಾರು ಪತ್ರವನ್ನು ತಾವು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾನು ನೋಡಿಲ್ಲವೆಂದು ನುಡಿಯುತ್ತಾರೆ. ಸದರಿ ಕರಾರು ಪತ್ರಕ್ಕೆ ನಮ್ಮ ತಂದೆ ಬೆಟ್ಟನಾಯಕ ಮತ್ತು ಅವರ ಸಹೋದರರು ಸೇರಿ ಪ್ರತಿವಾದಿ ಲಕ್ಷ್ಮಣರವರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಮನೆ ಮತ್ತು ಹಿತ್ತಲಿನ ಜಾಗ ಪ್ರತಿವಾದಿಗೆ ಸೇರಬೇಕೆಂದು ನನ್ನ ತಂದೆ ಮತ್ತು ಅವ ಸಹೋದರರು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಕೆ. ಬೆಳ್ತೂರು ಹೊಸ ಬಡಾವಣೆಯಲ್ಲಿ ವಾಸ ಮಾಡಿಕೊಂಡಿರುತ್ತೇನೆಂದರೆ ಸರಿ, ಸಾಕ್ಷಿಯು ಮುಂದುವರಿದು ಕೆ. ಬೆಳ್ತೂರು ಗ್ರಾಮದಲ್ಲಿಯೂ ಸಹ ಇರುತ್ತೇನೆಯಿ ನುಡಿಯುತ್ತಾರೆ. ಕೆ. ಬೆಳ್ತೂರು ಹೊಸ ಬಡಾವಣೆಯಲ್ಲಿರುವ ಆಸ್ತಿ ತಮಗೆ ಹೇಗೆ ಬಂದಿರುತ್ತದೆಂದರೆ ಸಾಕ್ಷಿಯು ಮೈರಾಡ ಯೋಜನೆಯಡಿ ನನಗೆ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಮೈರಾಡ ವತಿಯಿಂದ ಆಸ್ತಿಯನ್ನು ಕೊಟ್ಟಿರುತ್ತಾರೆಂದು ಹೇಳಿದ್ದು, ತಮ್ಮ ಬಳಿ ಆಸ್ತಿಯ ಸಂಬಂಧ ಏನು ದಾಖಲೆ ಇದೆ ಎಂದರೆ ಸಾಕ್ಷಿಯು ಮೈರಾಡ ವತಿಯಿಂದ ಒಂದು ದಾಖಲೆಯನ್ನು ಕೊಟ್ಟಿರುತ್ತಾರೆ ಆ ದಾಖಲೆಯ ಹೆಸರು ಹೇಳಲು ನನಗೆ ಗೊತ್ತಾಗುವುದಿಲ್ಲವೆಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ತಮಗೆ ತೋಂದರೆ ಇಲ್ಲವಾ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ಕರಗಮ್ಮ ನನ್ನ ಅಜ್ಜಿ. ಕರಗಮ್ಮ ದಾವಾ ಆಸ್ತಿಗೆ ಸಂಬಂಧಪಟ್ಟದಂತೆ ತಮ್ಮ ತಾಯಿಗೆ ಯಾವುದಾದರೂ ಪತ್ರ ಮಾಡಿಕೊಟ್ಟಿರುತ್ತಾರಾ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ 02 ಅಂಗಡಿ ಮಳಿಗೆಗಳನ್ನು ತಾವೇ ನಿರ್ಮಾಣ ಮಾಡಿರುತ್ತೀರಾ ಎಂದು ಹೇಳಿದ್ದು, ಈ ಬಗ್ಗೆ ಲೈಸೆನ್ಸ್ ವಗೈರೆ

ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಮಾಡಿರುತ್ತೇನೆಂದು ನುಡಿಯುತ್ತಾರೆ. ಯಾವುದೇ ದಾಖಲೆ ಹಾಜರುಮಾಡದಿದ್ದರೂ ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯೇ ಅಂಗಡಿ-ಮಳಿಗೆಯನ್ನು ನಿರ್ಮಿಸಿದ್ದು, ಅವರು ನಿರ್ಮಿಸಿರುವ ವಿಚಾರ ನನಗೆ ಗೊತ್ತಿದ್ದರೂ ನಾನೇ ನಿರ್ಮಿಸಿರುತ್ತೇನೆಂದು ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ಎಲ್ಲಿ ನ್ಯಾಯಾಲಯಕ್ಕೆ ಬಂದು ನನ್ನ ತಾಯಿ ಸಾಕ್ಷ್ಯ ನುಡಿದರೆ ಗೊತ್ತಾಗುತ್ತದೆಂದು ತಿಳಿದು ಪ್ರತಿವಾದಿಗಳಿಗೆ ಸೇರಿದ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ನನ್ನ ತಾಯಿಯಿಂದ ಜಿ.ಪಿ.ಎ. ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗು ಮತ್ತು ನನಗು ಯಾವುದೇ ಸಂಬಂಧವಿಲ್ಲದಿದ್ದರು ಪಂಚಾಯಿತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಇ-ಸ್ವತ್ತನ್ನು ನಮೂದಿಸಿಕೊಂಡು ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಯೇ 02 ಅಂಗಡಿ ಮಳಿಗೆ ಮತ್ತು ಮನೆಯನ್ನು ನಿರ್ಮಿಸಿಕೊಂಡಿದ್ದುದ ಸದರಿ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**